For More Job News Visit: www.kpscvaani.com

NR-208 GR-100

**ನೇಮಕಾತಿ ಜರೂರು**

**ಟಿ.ಪಿ./ಫ್ಯಾಕ್ಸ್ /ಇ-ಮೇಲ್ ಸಂದೇಶ**

ಗೆ :

1] ಪೊಲೀಸ್ ಆಯುಕ್ತರು: ಮೈಸೂರು ನಗರ, ಹುಬ್ಬಳ್ಳಿ-ಧಾರವಾಡ ನಗರ, ಮಂಗಳೂರು ನಗರ, ಬೆಳಗಾವಿ ನಗರ ಮತ್ತು ಕಲಬುರಗಿ ನಗರ.

2) ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್: ದಕ್ಷಿಣ ವಲಯ-ಮೈಸೂರು/ ಪಶ್ಚಿಮ ವಲಯ-ಮಂಗಳೂರು/ ಪೂರ್ವ ವಲಯ-ದಾವಣಗೆರೆ/ ಉತ್ತರ ವಲಯ-ಬೆಳಗಾವಿ/ ಈಶಾನ್ಯ ವಲಯ-ಕಲಬುರಗಿ ಮತ್ತು ಬಳ್ಳಾರಿ ವಲಯ-ಬಳ್ಳಾರಿ.

3] ಡೆಪ್ಯೂಟಿ ಕಮೀಷನರ್ ಆಫ್ ಪೊಲೀಸ್: ಸಿಎಆರ್(ದಕ್ಷಿಣ) ಮತ್ತು ಸಿಎಆರ್(ಕೇಂದ್ರಸ್ಥಾನ)-ಬೆಂಗಳೂರು.

4) ಕಮಾಂಡೆಂಟ್: 3ನೇ ಪಡೆ & 4ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು ಮತ್ತು 2ನೇ ಪಡೆ-ಬೆಳಗಾವಿ.

ಇಂದ : ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್, ನೇಮಕಾತಿ, ಬೆಂಗಳೂರು.

---

ಸಂಖ್ಯೆ: 98/ನೇಮಕಾತಿ-2/2020-21 ದಿನಾಂಕ: .06.2021

---

ಈ ಕಛೇರಿಯ ಫ್ಯಾಕ್ಸ್ ಸಮ ಸಂಖ್ಯೆ ದಿನಾಂಕ: 09.06.2021 ರಲ್ಲಿ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಸಿವಿಲ್) (ಪುರುಷ ಮತ್ತು ಮಹಿಳಾ) ಹಾಗೂ ಸೇವಾನಿರತ ಹುದ್ದೆಗಳ ನೇಮಕಾತಿ ಸಂಬಂಧವಾಗಿ ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಗಳನ್ನು ತಾತ್ಕಾಲಿಕವಾಗಿ ದಿನಾಂಕ: 05.07.2021 ರಿಂದ ಪ್ರಾರಂಭಿಸಲು ನಿರ್ಧರಿಸಲಾಗಿತ್ತು(.) ಆದರೆ ಕೋವಿಡ್-19 ಪ್ರಕರಣಗಳ ಸಂಖ್ಯೆ ರಾಜ್ಯಾದ್ಯಂತ ಹೆಚ್ಚಿನ ಪ್ರಮಾಣದಲ್ಲಿ ಇರುವ ಕಾರಣ ಸದರಿ ದಿನಾಂಕಗಳಂದು ನಡೆಸಲು ಸಾಧ್ಯವಾಗುವುದಿಲ್ಲ(.) ಆದಕಾರಣ ಮೇಲ್ಕಂಡ ಪರೀಕ್ಷೆಗಳನ್ನು ಜುಲೈ ತಿಂಗಳ ಅಂತ್ಯದಲ್ಲಿ ಪ್ರಾರಂಭಿಸಲು ನಿರ್ಧರಿಸಲಾಗಿರುತ್ತದೆ(.) ಆದ್ದರಿಂದ, ಸಹಿಷ್ಣುತೆ ಮತ್ತು ದೇಹದಾರ್ಢ್ಯತೆ ಪರೀಕ್ಷೆಗಳಲ್ಲಿ ಉಪಯೋಗಿಸುವ ವಿವಿಧ ರೀತಿಯ ಸಲಕರಣೆಗಳನ್ನು ಕಾನೂನು ಮಾಪನಶಾಸ್ತ್ರ ಇಲಾಖೆ (Department of Legal Metrology) ಯಿಂದ ಮಾಪನಾಂಕ (Calibration) ಮಾಡಿಸಿ ಸಿದ್ಧಪಡಿಸಿಟ್ಟುಕೊಂಡಿರಬೇಕೆಂದು ಈ ಮೂಲಕ ಕೋರಲಾಗಿದೆ(.)

---

(ಅಮೃತ್ ಪಾಲ್, ಐಪಿಎಸ್)
ಅಡಿಷನಲ್ ಡೈರೆಕ್ಟರ್ ಜನರಲ್ ಆಫ್ ಪೊಲೀಸ್,
ನೇಮಕಾತಿ, ಬೆಂಗಳೂರು.

ಪ್ರತಿಯನ್ನು:- ಉಸ್ತುವಾರಿ ಅಧಿಕಾರಿ, ಟಿ.ಪಿ. ವಿಭಾಗ, ಪೊ.ಮ.ನಿ. ಕಛೇರಿ, ಬೆಂಗಳೂರು ರವರಿಗೆ ತುರ್ತು ರವಾನೆಗಾಗಿ.